## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 49 |
| ಮಾನ್ಯ ಸದಸ್ಯರ ಹೆಸರು | : | ಅ. ದೇವೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 13.02.2023 |
| ಉತ್ತರಿಸಬೇಕಾದ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು. |

| ಕ್ರ.ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಸರ್ಕಾರವು ದಿನಾಂಕ:20.07.2022ರಂದು NHK/RBSKರಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಯುಷ್ ವೈದ್ಯರ ವೇತನವನ್ನು ರೂ.48,000/-ಗಳಿಗೆ ತಕ್ಷಣ ಹೆಚ್ಚಿಸುವುದಾಗಿ ಪತ್ರಿಕಾ ಹೇಳಿಕೆ ನೀಡಿರುವುದು ನಿಜವೇ; ಇದು ಕಾರ್ಯಗತವಾಗಿದೆಯೇ; ಆಗದಿದ್ದಲ್ಲಿ, ಕಾರಣವೇನು; (ಮಾಹಿತಿ ನೀಡುವುದು) | ಈ ಕುರಿತು ಯಾವುದೇ ಪತ್ರಿಕಾ ಪ್ರಕಟಣೆ ನೀಡಿರುವುದಿಲ್ಲ. |
| ಆ) | NHK/RBSK ಅಡಿಯಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಯುಷ್ ವೈದ್ಯರಿಗೂ ಅಲೋಪತಿ ವೈದ್ಯರಿಗೂ ಒಂದೇ ಕೆಲಸ ಆದರೂ ವೇತನದಲ್ಲಿ ತಾರತಮ್ಯವಿದೆಯೇ; ಹಾಗಿದ್ದಲ್ಲಿ ಕಾರ್ಮಿಕ ನ್ಯಾಯಾಲಯದ ಆದೇಶಾನುಸಾರ ಸಮಾನ ಕೆಲಸಕ್ಕೆ ಸಮಾನ ವೇತನ ಅನ್ವಯವಾಗುವುದಿಲ್ಲವೇ; ಸಮಾನ ವೇತನ ಪಡೆಯಲು ಆಯುಷ್ ವೈದ್ಯರು ಅರ್ಹರಿಲ್ಲವೇ; (ಮಾಹಿತಿ ನೀಡುವುದು). | • ಹೌದು<br>• ಕೇಂದ್ರ ಸರ್ಕಾರದ ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಯಡಿ (NHM) ಪ್ರತೀ ವರ್ಷದ ROPಯಲ್ಲಿ ಅನುಮೋದನೆಯಾಗಿರುವಂತೆ ರಾಷ್ಟ್ರೀಯ ಆರೋಗ್ಯ ಅಭಿಯಾನದ RBSK ಕಾರ್ಯಕ್ರಮದಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರಿಗೆ (BAMS & MBBS) ವೇತನವನ್ನು ನೀಡಲಾಗುತ್ತಿದೆ. |
| ಇ) | ಖಾಸಗಿ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಯುಷ್ ವೈದ್ಯರಿಗೆ ಸರ್ಕಾರ ಕನಿಷ್ಠ ವೇತನ ನಿಗಧಿಪಡಿಸಿದೆಯೇ; ನಿಗಧಿಪಡಿಸಿದ್ದಲ್ಲಿ, ನಿಗಧಿಪಡಿಸಿರುವ ವೇತನವೆಷ್ಟು; ಸರ್ಕಾರದಲ್ಲಿಕಾರ್ಯನಿರ್ವಹಿಸುತ್ತಿರುವ ಆಯುಷ್ ವೈದ್ಯರಿಗೆ ಈ ಕನಿಷ್ಠ ವೇತನ ಅನ್ವಯಿಸುವುದಿಲ್ಲವೇ? (ಮಾಹಿತಿ ನೀಡುವುದು). | • ಖಾಸಗಿ ವಲಯದಲ್ಲಿ ಕೆಲಸ ಮಾಡುವ ಆಯುಷ್ ವೈದ್ಯರಿಗೆ ಆಯುಷ್ ಇಲಾಖೆಯಿಂದ ಕನಿಷ್ಠ ವೇತನ ನಿಗಧಿಪಡಿಸುವುದಿಲ್ಲ.<br>• KPSC ಹಾಗೂ ಇತರೆ ಆಯ್ಕೆ ಪ್ರಾಧಿಕಾರಗಳಿಂದ ಆಯ್ಕೆಗೊಂಡು ಆಯುಷ್ ಇಲಾಖೆಯಲ್ಲಿ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ಆಯುಷ್ ವೈದ್ಯರಿಗೆ ಆರ್ಥಿಕ ಇಲಾಖೆಯು ನಿಗಧಿಪಡಿಸಿರುವಂತೆ ವೇತನ ನೀಡಲಾಗಿರುತ್ತದೆ.<br>• ಆಯುಷ್ ಇಲಾಖೆಯಲ್ಲಿ ಖಾಯಂ ಆಗಿ ಮಂಜೂರಾದ ಹುದ್ದೆಗಳ ಎದುರಾಗಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುವ ಆಯುಷ್ ವೈದ್ಯಾಧಿಕಾರಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಆಕುಕ 301 ಪಿಐಎಂ 2018, ದಿನಾಂಕ: 21-07-2020 ರನ್ವಯ ರೂ.45000/-ಗಳ ಮಾಸಿಕ ಸಂಚಿತ ವೇತನವನ್ನು ನೀಡಲಾಗುತ್ತಿದೆ.<br>• ರಾಷ್ಟ್ರೀಯ ಆರೋಗ್ಯ ಅಭಿಯಾನದ RBSK ಕಾರ್ಯಕ್ರಮದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆಯುಷ್ ವೈದ್ಯರುಗಳಿಗೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ROPರಲ್ಲಿ ಅನುಮೋದನೆಯಾಗಿರುವಂತೆ ವೇತನ ಪಾವತಿಸಲಾಗುತ್ತಿದೆ. |

**ಸಂಖ್ಯೆ: ಆಕುಕ 07 ಎಸ್.ಟಿ.ಕ್ಯೂ 2023**

(ಡಾ|| ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು